ಅ) ಇತ್ತೀಚಿನ ದಿನಗಳಲ್ಲಿ ಈ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ತುಂಬಾ ಕಡಿಮೆಯಾಗಿದ್ದು, ಒಂದು ಕೊಳವೆ ಬಾವಿಯಲ್ಲಿ ನೀರು ಬತ್ತಿಹೋಗಿರುತ್ತದೆ. ಆದಾಗ್ಯೂ ಕ್ಷೇತ್ರದಲ್ಲಿ ಯಾವುದೇ ಮರಗಿಡಗಳು ಒಣಗಿರುವುದಿಲ್ಲ.

ಇ) ಈ ಕ್ಷೇತ್ರದಲ್ಲಿ ಒಟ್ಟಾರೆ ಎರಡು ಕೊಳವೆ ಬಾವಿಗಳಿದ್ದು. ಒಂದು ಕೊಳವೆ ಬಾವಿ ಇತ್ತೀಚಿನ ದಿನಗಳಲ್ಲಿ ಮಳೆ ತುಂಬಾ ಕಡಿಮೆಯಾಗಿರುವ ಕಾರಣ ಬತ್ತಿಹೋಗಿರುತ್ತದೆ. ಉಳಿದ ಒಂದು ಕೊಳವೆ ಬಾವಿ ನೀರನ್ನು ಉಪಯೋಗಿಸಿಕೊಂಡು ಕ್ಷೇತ್ತದಲ್ಲಿರುವ ಗಿಡ ಮರಗಳಿಗೆ ಹಾಗೂ ಸಸ್ಯಾಭಿವೃದ್ಧಿಗೆ ಬಳಸಲಾಗುತ್ತಿದೆ. 2000–2001 ನೇ ಸಾಲಿನಲ್ಲಿ ಹೊಸದಾಗಿ ಒಂದು ಕೊಳವೆ ಬಾವಿಯನ್ನು ಕೊರೆಸಿದ್ದು. ಇದಕ್ಕೆ ಪಂಪ್ ಅಳವಡಿಸಲು ಪ್ರಯತ್ನಿಸಿದಾಗ ಬೆಣಚುಕಲ್ಲುಗಳು ಅಡ್ಡ ಬಂದು ಅಳವಡಿಸಲು ಸಾಧ್ಯವಾಗಲಿಲ್ಲ. ಆದಾಗ್ಯೂ ಈ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವುದಿಲ್ಲ.

ಮೇಲಿನ ವಿವರಣೆಯಿಂದಾಗಿ ನಿರ್ಲಕ್ಷ್ಯ ಮಾಡಿ ಫಾರಂ ಈ ರೀತಿ ಆಗಲೂ ಕಾರಣರಾರೆನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಸ್ತುತ ಸಾಲಿನಲ್ಲಿ ಈ ಕೊಳವೆಬಾವಿಯನ್ನು ರೀಡ್ರಿಲ್ ಮಾಡಿಸಿ ಪಂಪ್ ಅಳವಡಿಸಿ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ.

ಉ) ಪ್ರಸ್ತುತ ಸಾಲಿನಲ್ಲಿ ರೀಡ್ರಿಲ್ ಮಾಡಿಸಲು ಕ್ರಮ ಕೈಗೊಳ್ಳಲಾಗುವುದು.

ತುರುವೇಕೆರೆ ತಾಲ್ಲೂಕಿನಲ್ಲಿ ಕೈಗೊಂಡ ಏತ ನೀರಾವರಿ ಯೋಜನೆಗಳು

4678 (5400) :ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೆಕೆರೆ ತಾಲ್ಲೂಕಿನ ದಬ್ಬೇಗಟ್ಟ ಹಾಗೂ ಕಸಬಾ ಹೋಬಳಿಯ 2 ಏತ ನೀರಾವರಿ ಯೋಜನೆಗಳು ಯಾವ ಹಂತದಲ್ಲಿದೆ;

ಆ) ಕಳೆದ ಎರಡು ವರ್ಷಗಳಿಂದ ಈ ಯೋಜನೆಗೆ ಈ ಭಾಗದ ಜನರ ಬೇಡಿಕೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ತಕ್ಷಣ ಈ ಯೋಜನೆಯನ್ನು ಕಾರ್ಯಗತ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು;

ಈ) ಯಾವಾಗ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ತುವೇಕೆರೆ ತಾಲ್ಲೂಕಿನ ದಬ್ಬೇಗಟ್ಟ ಹೋಬಳಿಯ ಏತ ನೀರಾವರಿ ಯೋಜನೆಗಳ ಬಗ್ಗೆ ಪರಿಶೀಲಿಸಲಾಗುವುದು.

ಆ) ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಇ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಈ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಅಗರಬತ್ತಿ ವರ್ಕ್ಸ್ ಅದರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

4680 (5193) : ಡಾ: ನಾಗಪ್ಪ ವೈ (ಹರಹರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಗರಬತ್ತಿ ವರ್ಕ್ಸ್ ಅಂಡ್ ಆದರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಸ್ಥಾಪಿತವಾಗಿ 20 ವರ್ಷ ಕಳೆದಿದ್ದರೂ ಯಾವುದೇ ನಿವೇಶ ಸದಸ್ಯರುಗಳಿಗೆ ಹಂಚಿಕೆ ಮಾಡಿಲ್ಲ. ಆದರೂ ಈವರೆಗೆ ಮುಂದುವರೆಸಲು ಕಾರಣವೇನು;

ಆ) ಕರ್ನಾಟಕ ನ್ಯಾಯಾಲಯದ ರಿಟ್ ಅರ್ಜಿ 31576:1998 ಮತ್ತು 31602:98ರ ದಿನಾಂಕ 16.7.1999ರ ಆದೇಶದಲ್ಲಿ 3 ತಿಂಗಳೊಳಗಾಗಿ ಸಂಘವನ್ನು ಸಮಾಪನೆ ಮಾಡಲು ಆದೇಶಿಸಿದ್ದರೂ ಸಹ ಅದಕ್ಕೆ ವ್ಯತಿರಿಕ್ತವಾಗಿ ಮುಂದುವರೆಸಲು ಆದೇಶ ಮಾಡಲು ಯಾರು ಕಾರಣ;

ಇ) ಸಂಘದ ಅಧ್ಯಕ್ಷರು ಸಂಘದ ಹೆಸರಿನಲ್ಲಿ ಅವ್ಯವಹಾರ ನಡೆಸಿದ್ದರೂ ಅವರ ಮೇಲೆ ಕಾನೂನು ಕ್ರಮ ಜರುಗಿಸಿಲ್ಲ, ಇದಕ್ಕೆ ಕಾರಣರಾರು;

ಈ) ಈ ಸಂಘವನ್ನು ಇಷ್ಟು ವರ್ಷದವರೆಗೆ ಮುಂದುವರೆಸಿದ್ದು ಸರ್ಕಾರಕ್ಕೆ ಆದ ನಷ್ಟವೆಷ್ಟು; ಈ ಸಂಘವನ್ನು ಈಗಲಾದರೂ ಸಮಾಪನಗೊಳಿಸಲು ಕ್ರಮ ಜರುಗಿಸುವರೆ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಅಗರಬತ್ತಿ ವರ್ಕರ್ಸ್ ಅಂಡ್ ಅದರ್ಸ್ ಗೃಹ ನಿರ್ಮಾಣ ಸಹಕಾರ ಸಂಘವು ನೋಂದಣಿಯಾದಾಗಿನಿಂದ ತನ್ನ ಸದಸ್ಯರಿಗೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. ಆದರೆ ಈ ಸಂಘವು ನಿವೇಶನ ಹಂಚಿಕೆ ಮಾಡುವ ದೃಷ್ಟಿಯಿಂದ, ಬೆಂಗಳೂರು ಉತ್ತರ ತಾಲ್ಲೂಕು, ಚಿಕ್ಕ ಬೆಟ್ಟಹಳ್ಳಿ ಗ್ರಾಮದಲ್ಲಿ 4,16 1/2 ಎಕರೆ ಜಮೀನು ಖರೀದಿಸಿದ್ದು ಜಮೀನಿನ ಬಗ್ಗೆ ತಕರಾರುಗಳು ಉದ್ಭವಿಸಿದ್ದು ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ದಾವೆ ಸಂಖ್ಯೆ: 5540:90 ಓಎಸ್ 3341:92ಗಳಲ್ಲಿ ದಿನಾಂಕ: 11.4.2000 ರಂದು ಸಂಘದ ಪರ ತೀರ್ಮಾನವಾಗಿದ್ದು ಆದೇಶವನ್ನು ಪ್ರಶ್ನಿಸಿ ಎದುರು ಪಕ್ಷದವರು ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಆರ್.ಎಫ್.ಎ.ಎನ್.ಅರ್ಜಿ ಸಂಖ್ಯೆ: 529–530:2001 ರಂತೆ ಅಪೀಲು ಹೂಡಿದ್ದು ವಿಚಾರಣೆ ಹಂತದಲ್ಲಿರುತ್ತದೆ. ಈ ಜಮೀನು ಸಂಘದ ಪರವಾಗಿ ತೀರ್ಮಾನವಾದಲ್ಲಿ ಬಡಾವಣೆ ನಿರ್ಮಿಸುವ ಮತ್ತು ಸದಸ್ಯರಿಗೆ ನಿವೇಶನ ಹಂಚುವ ಕ್ರಮಕ್ಕಾಗಿ ಸಂಘವು ಮುಂದುವರಿಯಬೇಕಾಗುತ್ತದೆ. ಆದರೂ ಈ ಸಂಘವು ತನ್ನ ಉದ್ದೇಶ ಈಡೇರಿಸದೇ ಇದ್ದ ಕಾರಣ ದಿನಾಂಕ: 26.11.97 ರಂದು ಸಮಾಪನೆಗೊಳಿಸಲಾಗಿತ್ತು. ಆದರೆ ನ್ಯಾಯಾಲಯದ ಆದೇಶದಂತೆ ದಿನಾಂಕ: 7.1.2000 ರಂದು ಪುನಃಶ್ಚೇತನಗೊಳಿಸಲಾಗಿದ್ದು ಸಂಘವು ಇಲ್ಲಿಯವರೆಗೆ ಮುಂದುವರೆಸಿದೆ.

ಆ) ಈ ಸಂಘದ ಸಮಾಪನಾ ಆದೇಶದ ವಿರುದ್ಧ ಸಂಘದ ಆಡಳಿತ ಮಂಡಳಿಯವರು ಗೌರವ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ:31576:98ರ ಪ್ರಕಾರ ನ್ಯಾಯಾಲಯವು ದಿನಾಂಕ: 9.8.1999 ರಂದು ತೀರ್ಪು ನೀಡಿ ಈ ತೀರ್ಪಿನಲ್ಲಿ ಸಂಘವು ನೀಡಿರುವ ಸಾಕ್ಷಿ ಹಾಗೂ ಪುರಾವೆಗಳನ್ನು ಗಣನೆಗೆ ತೆಗೆದುಕೊಳ್ಳದೇ ಸಮಾಪನೆ ಮಾಡಿರುವುದನ್ನು ತೀವ್ರವಾಗಿ ಆಕ್ಷೇಪಿಸಿ ಸಮಾಪನಾ ಆದೇಶ ಹಾಗೂ ಆಫೀಲು ಆದೇಶಗಳನ್ನು ರದ್ದುಪಡಿಸಿ 3 ತಿಂಗಳೊಳಗಾಗಿ ಅರ್ಜಿದಾರರಿಂದ ಲಿಖಿತ ಹಾಗೂ ಮೌಖಿಕ ಅಹವಾಲುಗಳನ್ನು ಸ್ವೀಕರಿಸಿ ಅಗತ್ಯವಿದ್ದಲ್ಲಿ ದಿನನಿತ್ಯ ಮತ್ತು ಔಟ್ ಆಫ್ ಟರ್ನ್ ವಿಚಾರಣೆ ನಡೆಸಿ ಸಂಘದ ಸಮಾಪನಾ ಪ್ರಕ್ರಿಯೆಯನ್ನು ಮುಕ್ತಾಯ ಮಾಡಲು ಆದೇಶಿಸಿದ್ದು, ವಿಚಾರಣೆ ನಡೆಸಿದ ನಂತರ ಸಂಘದ ಅಹವಾಲುಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 27(3) ರನ್ವಯ ಆದೇಶ ಹೊರಡಿಸಿರುವುದರಿಂದ ಸಂಘವನ್ನು ಮುಂದುವರಿಸಲಾಗಿದೆ.

ಇ) ಸಂಘದ ಅಧ್ಯಕ್ಷರು ಸಂಘದ ಹೆಸರಿನಲ್ಲಿ ಖಾಸಗಿಯಾಗಿ ಬಡಾವಣೆ ನಿರ್ಮಿಸಿ ಅವ್ಯವಹಾರ ನಡೆಸಿರುವುದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 59ರ ಕಲಂ 65 ರನ್ವಯ ನಡೆಸಿದ ವರದಿಯಿಂದ ಕಂಡು ಬಂದಿದ್ದು ಸಂಘವು ಬಡಾವಣೆ ನಿರ್ಮಿಸಲಿರುವ ಜಮೀನು ನ್ಯಾಯಾಲಯದಲ್ಲಿ ತಕರಾರಿನಲ್ಲಿರುವ ಕಾರಣ ಅಧ್ಯಕ್ಷರ ವಿರುದ್ದ ಕ್ರಮ ಜರುಗಿಸಿಲ್ಲ. ಈ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಈ) ಈ ಸಂಘವನ್ನು ಮುಂದುವರೆಸಿರುವುದರಿಂದ ಸರ್ಕಾರಕ್ಕೆ ಯಾವುದೇ ನಷ್ಟವಾಗಿಲ್ಲ. ಹಾಲಿ ಈ ಸಂಘದ ಬಗ್ಗೆ ಇರುವ ದೂರುಗಳ ಬಗ್ಗೆ ಪರಿವೀಕ್ಷಣೆ ನಡೆಸಿದ್ದು ಸಂಘದ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ ಸಮಾಪನ ಗೊಳಿಸುವ ಪ್ರಸ್ತಾಪ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನ

4681 (5422) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೀರಾವರಿ ಇಲಾಖೆ ಪ್ರಾರಂಭವಾದ ದಿನಾಂಕ ಯಾವುದು;

ಆ) ನೀರಾವರಿ ಇಲಾಖೆ ಜಾರಿಗೆ ಬಂದ ಮೇಲೆ ರಾಜ್ಯದಲ್ಲಿದ್ದ ಮುಖ್ಯ ಕಾರ್ಯ ನಿರ್ವಾಹಕ ಅಭಿಯಂತರರು ಹಾಗೂ ಇಲಾಖಾ ಸಿಬ್ಬಂದಿ ಎಷ್ಟು; (ಹುದ್ದೆಗೆ ಅನುಗುಣವಾಗಿ ತಿಳಿಸುವುದು)

ಇ) ಇಲಾಖೆ ಸೃಷ್ಟಿ ಆದಾಗ ಯಾವ ಯಾವ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಣಯಿಸಲಾಯಿತು;

ಈ) ಇದರಲ್ಲಿ ಎಷ್ಟು ಸಂಪೂರ್ಣಗೊಂಡಿರುವುವು;

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಕರ್ನಾಟಕದಲ್ಲಿ ದಿನಾಂಕ : 20–10–1986ರಲ್ಲಿ ನೀರಾವರಿ ಇಲಾಖೆಯು ಲೋಕೋಪಯೋಗಿ ಇಲಾಖೆಯಿಂದ ಪ್ರತ್ಯೇಕಗೊಂಡಿತು. ದಿನಾಂಕ: 1–7–91 ರಂದು ವಿದ್ಯುಕ್ತವಾಗಿ ನೀರಾವರಿ ಇಲಾಖೆ ಎಂದು ಜಾರಿಗೊಂಡಿದೆ.

ಆ) ನೀರಾವರಿ ಇಲಾಖೆ ಜಾರಿಗೊಂಡ ನಂತರ 1986 ರಲ್ಲಿ ದರ್ಜೆ ಹಾಗೂ ಆಯ್ಕೆ ನಿಯಮಗಳಂತೆ (ಸಿ ಮತ್ತು ಆರ್ ರೂಲ್ಸ್) ಇಲಾಖೆಯಲ್ಲಿನ ಎ, ಬಿ, ಸಿ ಮತ್ತು ಡಿ ವರ್ಗಗಳ ಅಧಿಕಾರಿ/ನೌಕರರ ವಿವರಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.

ಇ) ಈ) 1986ರ ಪೂರ್ವದಲ್ಲಿ ಜಾರಿಯಲ್ಲಿದ್ದ ನೀರಾವರಿ ಯೋಜನೆಗಳೊಂದಿಗೆ ನೂತನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡಿರುವ ಯೋಜನೆಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಅನುಬಂಧ – 1

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಒಟ್ಟು ಹುದ್ದೆಗಳು
	ಗ್ರೂಪ್ ಎ	
1.	ಪ್ರಧಾನ ಇಂಜಿನಿಯರ್	9
2.	ಮುಖ್ಯ ಇಂಜಿನಿಯರ್	15
3.	ಅಧೀಕ್ಷಕ ಇಂಜಿನಿಯರ್	57